# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು- 570005.

ಸಂಖ್ಯೆ: ಎಸಿ4/59/2021-22

ದಿನಾಂಕ: 10.10.2022

## ಸುತ್ತೋಲೆ-V

**ವಿಷಯ:-** 2022-23ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಸ್ನಾತಕ ಪದವಿಗಳಿಗೆ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:-**
1. ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ: 16.08.2022.
2. ಸರ್ಕಾರದ ಆದೇಶ ಸಂಖ್ಯೆ:ಇಡಿ/217/ಯುಎನ್ಇ/2022 ಬೆಂಗಳೂರು, ದಿನಾಂಕ:17.08.2022.
3. ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ: 01.09.2022.
4. ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ: 14.09.2022.
5. ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ: 19.09.2022.
6. ಸರ್ಕಾರದ ಆದೇಶ ಸಂಖ್ಯೆ:ಇಡಿ/217/ಯುಎನ್ಇ/2022 ಬೆಂಗಳೂರು, ದಿನಾಂಕ: 26.09.2022
7. ಪ್ರಾಂಶುಪಾಲರುಗಳ ಮನವಿ ಪತ್ರಗಳ ದಿನಾಂಕ:01.10.2022
8. ಮಾನ್ಯ ಕುಲಪತಿಗಳ ಆದೇಶ ದಿನಾಂಕ:10.10.2022

******

2022-23ನೇ ಶೈಕ್ಷಣಿಕ ಸಾಲಿನ ಪದವಿ ಕೋರ್ಸ್‌ನ ಪ್ರಥಮ ವರ್ಷಕ್ಕೆ ಪ್ರವೇಶಾತಿಯನ್ನು ರೂ.500/-ಗಳ ದಂಡ ಶುಲ್ಕದೊಂದಿಗೆ ದಿನಾಂಕ: 30.09.2022ರ ವರೆಗೆ ಉಲ್ಲೇಖಿತ (5)ರ ಸುತ್ತೋಲೆಯಲ್ಲಿ ವಿಸ್ತರಿಸಲಾಗಿತ್ತು.

ಉಲ್ಲೇಖಿತ (7)ರ ಪ್ರಾಂಶುಪಾಲರುಗಳ ಮನವಿ ಮೇರೆಗೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ದಿನಾಂಕ 10.10.2022ರಿಂದ 14.10.2022ರವರೆಗೆ ರೂ.500/-ಗಳ ದಂಡ ಶುಲ್ಕದೊಂದಿಗೆ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸಲಾಗಿದೆ.

1. ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ಸಂಖ್ಯಾಮಿತಿಯೊಳಗೆ ಪ್ರವೇಶಾತಿ ನೀಡತಕ್ಕದ್ದು.
2. ಈ ಕಛೇರಿ ಸುತ್ತೋಲೆ ದಿನಾಂಕ **01.07.2022**ರಲ್ಲಿ ತಿಳಿಸಿರುವಂತೆ ಈಗಾಗಲೇ ನೀಡಿದ ಪ್ರವೇಶಾತಿಗಳ ಶುಲ್ಕ ಮತ್ತು ಅಗತ್ಯ ದಾಖಲೆಗಳನ್ನು ನಿಗಧಿಪಡಿಸಿದ ದಿನಾಂಕದೊಳಗೆ ಅನುಮೋದನೆಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.
3. ದಿನಾಂಕ **10.10.2022**ರಿಂದ **14.10.2022**ರವರೆಗೆ ಮಾಡಿಕೊಳ್ಳುವ ಪ್ರವೇಶಾತಿಗಳನ್ನು ದಿನಾಂಕ **15.10.2022**ರಿಂದ **20.10.2022**ರವರೆಗೆ ಪ್ರವೇಶಾತಿ ಅನುಮೋದನೆಗೆ ಶುಲ್ಕ ಹಾಗೂ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು.
4. ಮೇಲೆ ತಿಳಿಸಿದ ದಿನಾಂಕಗಳಂದು ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಂದ ನಿಗಧಿತ ಹಾಜರಾತಿ ಪಡೆಯುವ ಸ್ವಂತ ಜವಾಬ್ದಾರಿ ಬಗ್ಗೆ ಮುಚ್ಚಳಿಕೆ ಪತ್ರ ಪಡೆಯುವುದು. ಕಾಲೇಜಿನ ಪ್ರಾಂಶುಪಾಲರು ನಿಗಧಿತ ಹಾಜರಾತಿ ಕೊರತೆಯಾದಲ್ಲಿ ಸಂಬಂಧಿಸಿದ ಅಧ್ಯಾಪಕರುಗಳಿಂದ ವಿಶೇಷ ತರಗತಿಗಳನ್ನು ತೆಗೆದುಕೊಂಡು ಸರಿದೂಗಿಸುವಂತೆ ಮಾಡಿಕೊಳ್ಳುವುದು.

ಪು.ತಿ.ನೋ

Scanned with CamScanner

5. ಸರ್ಕಾರ ನಿಗಧಿಪಡಿಸಿರುವಂತೆ ದಿನಾಂಕ 01.09.2022 ರಿಂದ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್ ತರಗತಿಗಳು ಅಧಿಕೃತವಾಗಿ ಪ್ರಾರಂಭ ಮಾಡಿರುವುದರಿಂದ ಪ್ರವೇಶಾತಿಗೆ ದಿನಾಂಕ 10.10.2022 ರಿಂದ 14.10.2022ರ ವರೆಗೆ ನಿಗಧಿಪಡಿಸಿದ ದಿನಾಂಕವು ಅಂತಿಮವಾಗಿರುತ್ತವೆ.

ಕುಲಸಚಿವ,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು.

ಗೆ:-

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬೋರ್ಡ್/ಸಿ.ಡಿ.ಸಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪ್ರೊ.ಹೆಚ್.ಎಸ್ ನಾಗೇಂದ್ರಸ್ವಾಮಿ, UUCMS ನೋಡೆಲ್ ಆಫೀಸರ್,ಕಂಪ್ಯೂಟರ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು- ದಿನಾಂಕ 10.10.2022ರಿಂದ 15.10.2022ರವರೆಗೆ UUCMS Portal ತೆರೆಯಲು ಕ್ರಮವಹಿಸಲು ಕೋರಲಾಗಿದೆ.
6. ಮಾನ್ಯ ಕುಲಪತಿ/ ಕುಲಸಚಿವ ರವರ ಆಪ್ತ ಸಹಾಯಕರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
7. ಕಛೇರಿ ಪ್ರತಿ.

Scanned with CamScanner